

ಅಸಂಖ್ಯಾತ ಜನರ ನೋವಿಗೆ ಸ್ಪಂದಿಸಿದ್ದೇನೆ. ಹಲವರ ಪ್ರಾಣ ಉಳಿಸಿದ್ದೇನೆ. ಕಷ್ಟಕ್ಕೆ ಮಿಡಿದಿದ್ದೇನೆ. ಹಳ್ಳಿ, ಪಟ್ಟಣ, ನಗರ ಹಾಗೂ ರಾಜಧಾನಿ ಬೆಂಗಳೂರಿನ ಆತ್ಮ, ಅಸ್ಮಿತೆಯಾಗಿರುವ ವಿಧಾನಸೌಧದಲ್ಲೂ ಕೆಲಸ ಮಾಡಿದ್ದೇನೆ. ಚಿನ್ನದುಂಗುರ ಕೊಟ್ಟವರು ಯಾರು ಎಂದು ಹೇಗೆ ಊಹಿಸೋದು? ಡಾಕ್ಟರ್‌ಗೆ ಹೊಸ ಸವಾಲು ಎದುರಾಯಿತು. ಕೃಷ್ಣ ಎಲ್ಲೆಲ್ಲಿ ಕೆಲಸ ಮಾಡಿದ್ದರೋ, ಅಲ್ಲೆಲ್ಲಾ ಜನಾನುರಾಗಿ ಆಗಿದ್ದರು. ಕಡುಬಡವರು, ಶ್ರೀಮಂತರು, ಮಧ್ಯಮ ವರ್ಗದವರು ಪ್ರಶಂಸಿಸುವ ವೈದ್ಯರಾಗಿದ್ದರು. ಎಲ್ಲ ಜಾತಿ, ಜನಾಂಗ, ಸಮುದಾಯ, ಧರ್ಮದವರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಯಾವ ಊರಿನ ರೋಗಿ ಕೊಟ್ಟಿರಬಹುದು ಎಂಬ ಚಿಂತೆ ಕೃಷ್ಣನನ್ನು ಕಾಡತೊಡಗಿತು. ವೃತ್ತಿ ಆರಂಭದ ದಿನಗಳಿಂದ ಹಿಡಿದು ಇದೀಗ ಕೆಲಸ ಮಾಡುತ್ತಿರುವ ಶಕ್ತಿಕೇಂದ್ರದ ಒಳಹೊಕ್ಕರು. ಮಧುಗಿರಿಯ ಮರುವೇಕೆರೆ, ಕೊರಟಗೆರೆಯ ತೋವಿನಕೆರೆ, ದೊಡ್ಡಬಳ್ಳಾಪುರ, ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ವಿಧಾನಸೌಧದ ಚಿತ್ರಣವೂ ಸ್ಮೃತಿಪಟಲದಲ್ಲಿ ಒಂದೊಂದಾಗಿ ಬರತೊಡಗಿದವು. ನೂರಾರು ಜನರ ಪ್ರಾಣ ಉಳಿಸಿದ್ದು ನೆನಪಾಯಿತು. ಯಾರು ಕೊಟ್ಟವರು ಎಂಬುದು ಸ್ಪಷ್ಟವಾಗಲಿಲ್ಲ. ಕಲ್ಪನೆಯಲ್ಲೂ ಮೂಡಲಿಲ್ಲ. ಅಡುಗೆಮನೆಗೆ ಹೋಗಿದ್ದ ರುಕ್ಮಿಣಿ ಸಾಕಷ್ಟು ಅಡುಗೆ ಉಳಿದಿದೆ. ಹೊಸದಾಗಿ ಏನೊಂದು ಮಾಡುವ ಮನಸ್ಸಿಲ್ಲ. ಇದೊಂದು ದಿನ ಎಲ್ಲರೂ ಅನುಸರಿಸಿಕೊಂಡು ಊಟ ಮಾಡಿ ಎಂದರು.

ಗೊಂದಲದಲ್ಲೇ ಮುಳುಗಿದ್ದ ಕುಟುಂಬ ಊಟಕ್ಕೆ ಕೂತಿತು. ಊಟ ಮಾಡುವಾಗಲೂ ಚಿನ್ನದುಂಗುರದ್ದೇ ಚಿಂತೆ. ಊಟದ ಶಾಸ್ತ್ರ ಮುಗಿಯಿತು. ಎಂಜಲು ತಟ್ಟೆಗಳನ್ನು ತೆಗೆದಿಟ್ಟ ರುಕ್ಮಿಣಿಗೆ ಪಾತ್ರೆ ತೊಳೆಯುವ ಮನಸ್ಸಿಲ್ಲ. ಕೆಲಸದವರು ಇರಲಿಲ್ಲ. ಬೇಸರದಿಂದಲೇ ಪಾತ್ರೆಯ ಮೇಲೆ ಕೈಯಾಡಿಸತೊಡಗಿದರು. ತನಗೆ ನೆನಪಿದ್ದ ಒಂದೊಂದೇ ಘಟನೆಗಳನ್ನು ನೆನಪಿಸಿಕೊಳ್ಳ ತೊಡಗಿದರು. ತಡರಾತ್ರಿ ವರೆಗೂ ಯೋಚಿಸಿದರೂ ಸುಳಿವು ಸಿಗಲಿಲ್ಲ. ಆಯಾಸ ಆಗಿದ್ದರಿಂದ ಬೇಸತ್ತು ಮಲಗುವ ಕೋಣೆಗೆ ಹೋದರು. ಹಾಸಿಗೆಯ ಮೇಲೆ ಮಲಗಿದರೂ ನಿದ್ದೆಬಾರದು. ಯಾವಾಗ ಮಲಗಿದೆವು ಎಂಬುದು ಯಾರಿಗೂ ಗೊತ್ತಾಗಲಿಲ್ಲ. ಬೆಳಿಗ್ಗೆ ಎದ್ದ ತಕ್ಷಣವೇ ಮತ್ತದೇ ಚಿಂತೆ... ಹೀಗೆ ಮೂರು ದಿನ ಕಳೆದರೂ ಮೂಲ ಪತ್ತೆಯಾಗಲಿಲ್ಲ. ಯಾವುದರಲ್ಲೂ ಉತ್ಸಾಹ ಇರಲಿಲ್ಲ. ತೊಲ ಬಂಗಾರದ ಮೂಲ ಹುಡುಕಿಕೊಳ್ಳುವ ತನಕ ಮನಸ್ಸಿಗೆ ಸಮಾಧಾನವೇ ಇರಲಿಲ್ಲ.

ಸರಣಿ ಮಿಸ್ಡ್ ಕಾಲ್...

ಮೂರು ದಿನ ಮುಗಿದ ನಂತರ ಇದ್ದಕ್ಕಿದ್ದಂತೆ ಉತ್ತರ ಕರ್ನಾಟಕದ ವೈದ್ಯ ಗೆಳೆಯ ಶರಣಪ್ಪನ ನೆನಪಾಯಿತು ಕೃಷ್ಣನಿಗೆ. ಅಂದೊಮ್ಮೆ ಶರಣಪ್ಪ ತಮ್ಮೂರಿನಿಂದ ಬೆಂಗಳೂರಿಗೆ ಬರುತ್ತಿದ್ದರು. ರಾತ್ರಿ 10 ಗಂಟೆ ವೇಳೆಗೆ ಬಸ್ ಮೆಜೆಸ್ಟಿಕ್‌ಗೆ ತಲುಪುವುದಿತ್ತು. ನೆಲಮಂಗಲದಿಂದ ಸ್ವಲ್ಪ ಮುಂದೆ ಬರುತ್ತಿದ್ದಂತೆ ಎದೆನೋವು ಕಾಣಿಸಿಕೊಂಡಿತು. ಹೃದಯಾಘಾತದ ಮುನ್ಸೂಚನೆಯನ್ನು ಸೂಕ್ಷ್ಮವಾಗಿ ಗ್ರಹಿಸಿದ ಶರಣಪ್ಪ ವೈದ್ಯ ಮಿತ್ರರ ವಾಟ್ಸ್‌ಆ್ಯಪ್ ಗ್ರೂಪ್‌ಗೆ ತನಗಾಗುತ್ತಿರುವ ಯಾತನೆಯ ಸಂದೇಶವನ್ನು ಹಾಕಿದರು. ಎಷ್ಟೊತ್ತಾದರೂ ಯಾವ ಬಳಗದಿಂದಲೂ ಪ್ರತಿಕ್ರಿಯೆ ಬರಲಿಲ್ಲ.

ಹೊತ್ತು ಕಳೆದಂತೆ ಶರಣಪ್ಪನಿಗೆ ಎದೆನೋವು ಹೆಚ್ಚಿತು. ಗಾಬರಿಯಿಂದ ಮಿತ್ರ ಕೃಷ್ಣನ ಮೊಬೈಲ್‌ಗೆ ಫೋನ್ ಮಾಡಿದರು. ಕೃಷ್ಣ ಸಹಜವಾಗಿ ಕೆಲಸಕ್ಕೆ ಅಡ್ಡಿ ಆಗದಿರಲೆಂದು ತನ್ನ ಮೊಬೈಲ್ ಫೋನನ್ನು ಸೈಲೆಂಟ್ ಆಗಿ ಇಟ್ಟುಕೊಳ್ಳುತ್ತಿದ್ದ. ಶರಣಪ್ಪ ಹತ್ತಕ್ಕೂ ಹೆಚ್ಚು ಬಾರಿ ಫೋನ್ ಮಾಡಿದ್ದರೂ ಅದು ಕೃಷ್ಣನ ಗಮನಕ್ಕೆ ಬಂದಿರಲಿಲ್ಲ. ಕೆಲಸದ ಒತ್ತಡವೂ ಹೆಚ್ಚಿತ್ತು. ತನ್ನ ಕೆಲಸ, ಕಚೇರಿಯ ಕೆಲಸ ಮುಗಿಯುವುದರೊಳಗೆ ರಾತ್ರಿಯಾಗಿತ್ತು. ಒಮ್ಮೆ ತನ್ನ ಕೈಗಡಿಯಾರ ನೋಡಿಕೊಂಡ. ಅದು ರಾತ್ರಿ ಒಂಬತ್ತು ಗಂಟೆ ತೋರಿಸುತ್ತಿತ್ತು.

ಒಂದೆರಡು ನಿಮಿಷ ಸುಧಾರಿಸಿಕೊಂಡ ಕೃಷ್ಣ, ತನ್ನ ಕಚೇರಿಯ ವಾಶ್ ಬೇಸಿನ್‌ನಲ್ಲೇ ಮುಖ ತೊಳೆದುಕೊಂಡು ದಣಿವಾರಿಸಿಕೊಂಡ. ಸಮಯವಾಗಿದ್ದರಿಂದ ತಡಮಾಡದೆ ತನ್ನೆಲ್ಲಾ ವಸ್ತುಗಳನ್ನು ಬ್ಯಾಗ್‌ಗೆ ಹಾಕಿಕೊಂಡು ಹೊರಟ. ಮೊಬೈಲ್ ಫೋನ್ ಸಹ ನೋಡಲಿಲ್ಲ. ಮನೆಯಲ್ಲಿ ಮಡದಿ–ಮಕ್ಕಳು ಕಾಯುತ್ತಿರುತ್ತಾರೆ ಎಂಬ ಧಾವಂತದಿಂದ ಕಾರನ್ನೇರಿದ.

ತಾನೇ ಕಾರು ಚಲಾಯಿಸಿಕೊಂಡು ಮನೆಗೆ ಬಂದ. ಧರಿಸಿದ್ದ ಬಟ್ಟೆ ಕಳಚಿ ಬಾತ್‌ರೂಂನತ್ತ ಕೈ–ಕಾಲು ತೊಳೆಯಲು ಹೊರಟ. ಎಂದೂ ತನ್ನ ಪತಿಯ ಮೊಬೈಲ್ ನೋಡದ ರುಕ್ಮಿಣಿ ಅಂದು ಕೃಷ್ಣನ ಮೊಬೈಲ್ ಕೈಗೆತ್ತಿಕೊಂಡಳು. ಸ್ಕ್ರೀನ್ ಮೇಲೆ ಕಣ್ಣಾಡಿಸಿದರೆ ಒಬ್ಬರಿಂದಲೇ ಹತ್ತಕ್ಕೂ ಹೆಚ್ಚು ಫೋನ್ ಬಂದಿದ್ದವು. ಅದೂ ವೈದ್ಯರಿಂದ. ಏನೋ ಅನಾಹುತ ಆಗಿರಬೇಕು ಎಂದು ಊಹಿಸಿದ ರುಕ್ಮಿಣಿ ಸೀದಾ ಬಚ್ಚಲು ಮನೆಯತ್ತ ದೌಡಾಯಿಸಿದಳು. ದೂರದಿಂದಲೇ ಕೃಷ್ಣನಿಗೆ ಕೇಳುವಂತೆ ‘ಶರಣಪ್ಪಣ್ಣ ಅವರು ಹಲವು ಬಾರಿ ಫೋನ್ ಮಾಡಿದ್ದಾರೆ. ನೀವು ನೋಡಿಕೊಂಡಿಲ್ಲವಲ್ಲ’ ಎಂದಳು.

ಪತ್ನಿಯ ಮಾತು ಕೇಳುತ್ತಿದ್ದಂತೆ ಕೃಷ್ಣನಿಗೂ ಆತಂಕ ಶುರುವಾಯಿತು. ದಣಿದು ಆಯಾಸಗೊಂಡಿದ್ದ ಆತ ನಿರಾಳನಾಗಲು ತನ್ನ ಕೈ–ಕಾಲುಗಳಿಗೆ ನೀರು ಒಯ್ದುಕೊಳ್ಳುತ್ತಿದ್ದ. ತಕ್ಷಣವೇ ಚೊಂಬನ್ನು ಬಕೀಟಿನೊಳಗೆ ಬಿಸಾಕಿದ. ಅಲ್ಲಿಯೇ ನೇತಾಕಿದ್ದ ಟವೆಲ್ ಒಂದನ್ನು ಎತ್ತಿಕೊಂಡು ಮುಖ–ಕೈಕಾಲು ಒರೆಸಿಕೊಂಡು, ಹೆಂಡತಿಯ ಬಳಿಯಿದ್ದ ಮೊಬೈಲ್ ಇಸ್ಕೊಂಡ.

ಒಂದೆರೆಡು ಕ್ಷಣದಲ್ಲೇ ಡಯಲ್ ಮಾಡಿದ. ಕಿರಿಕಿರಿಯ ಕೀರಲು ಧ್ವನಿಮುದ್ರಿತ ಸಂದೇಶ ಕೇಳಿಬಂತು. ಆತುರದಲ್ಲಿದ್ದವನಿಗೆ ಸಿಟ್ಟು, ಬೇಸರವು ಆಯಿತು. ಆ ಧ್ವನಿಮುದ್ರಿಕೆಯನ್ನು ತಪ್ಪಿಸುವ ಸಂಖ್ಯೆಯೊಂದನ್ನು ಒತ್ತಿದ. ಕೆಲ ಕ್ಷಣದಲ್ಲೇ ಆ ಕಡೆಯಿಂದ ಕೃಷ್ಣ ಎಂಬ ಆರ್ತನಾದ ಕೇಳಿತು. ‘ಏನಾಯಿತೋ ಶರಣು’ ಎಂದಿದ್ದೇ ತಡ... ‘ಸಹಿಸಲಾಗದಷ್ಟು ಎದೆನೋವಿದೆ. ಮೆಜೆಸ್ಟಿಕ್‌ನಲ್ಲಿರುವೆ. ತುರ್ತುಚಿಕಿತ್ಸೆ ಬೇಕು. ಬೇಗ ಬಂದು ನನ್ನ ಜೀವ ಉಳಿಸು’ ಎಂದ.

ತಕ್ಷಣವೇ ಮೆಜೆಸ್ಟಿಕ್‌ನಿಂದ ಆಟೊ ಹಿಡಿದು ‘ಅಲ್ಲಿಯೇ ಸಮೀಪದಲ್ಲಿರುವ ಮಲ್ಲಿಗೆ ನರ್ಸಿಂಗ್ ಹೋಂಗೆ ಬಾ ಶರಣು. ಗಾಬರಿಯಾಗಬೇಡ. ಆತಂಕ ಪಡಬೇಡ. ಅಲ್ಲಿ ಒಂದಷ್ಟು ಸೌಲಭ್ಯವಿದೆ. ಮೊದಲು ತುರ್ತುಚಿಕಿತ್ಸೆ ಮಾಡುವೆ. ನಂತರ ಬೇರೆಡೆ ಕರೆದುಕೊಂಡು ಹೋಗುವೆ’ ಎಂದ ಕೃಷ್ಣ. ‘ಹಾಗೆಯೇ ಮಾಡುವೆ, ನೀ ಬೇಗ ಬಾರಪ್ಪ’ ಎಂದ ಶರಣಪ್ಪ.

ರುಕ್ಮಿಣಿ ಊಟಕ್ಕೆ ಅಣಿ ಮಾಡುತ್ತಿದ್ದರು. ಕೃಷ್ಣ ತನ್ನ ಹಾಗೂ ಮಡದಿ–ಮಕ್ಕಳ ಹಸಿವನ್ನು ಲೆಕ್ಕಿಸದೆ, ‘ನನಗಾಗಿ ಕಾಯಬೇಡಿ; ನೀವು ಊಟ ಮಾಡಿ ಮಲಗಿರಿ. ನಾನು ಹೋಗಿಬರುವೆ’ ಎಂದು ಕಾರು ಏರಿದ. ಕಾರು ಚಲಾಯಿಸಿಕೊಂಡೇ ನರ್ಸಿಂಗ್ ಹೋಂನವರಿಗೆ ಫೋನ್ ಮಾಡಿದ. ವೈದ್ಯರೊಬ್ಬರಿಗೆ ಹೃದಯಾಘಾತದ ಲಕ್ಷಣ ಕಂಡುಬಂದಿದೆ. ಅವರನ್ನು ನಿಮ್ಮಲ್ಲಿಗೆ ಬರಲು ಹೇಳಿದ್ದೇನೆ. ಅವರ ಹೆಸರು ಶರಣಪ್ಪ ಎಂದು. ನೀವು ಹೆಚ್ಚಿನ ವಿಚಾರಣೆ ನಡೆಸದಿರಿ. ನಾನೇ ಬಂದು ಎಲ್ಲ ವಿವರಣೆ ನೀಡುವೆ. ಚಿಕಿತ್ಸೆಗೆ ಸಜ್ಜು ಮಾಡಿಕೊಂಡಿರಿ ಎಂದು ಸೂಚಿಸಿದ.

ಹದಿನೈದು ನಿಮಿಷ ಕಳೆಯುವುದರೊಳಗಾಗಿ ಶರಣಪ್ಪ ನರ್ಸಿಂಗ್ ಹೋಂ ಸೇರಿದ್ದ. ಅವನ ಆರೋಗ್ಯ ಕ್ಷಣಕ್ಷಣಕ್ಕೂ ಕ್ಷೀಣಿಸುತ್ತಿತ್ತು. ಮೊದಲೇ ಮಾಹಿತಿ ಇದ್ದುದರಿಂದ ನರ್ಸ್‌ಗಳು ಒಂದಷ್ಟು ಶುಶ್ರೂಷೆ ಮಾಡಿದರು. ಶರಣಪ್ಪನಿಗೆ ಕೊಂಚ ಸಮಾಧಾನ ಆಯಿತು. ಅದಾದ ಮೂರ್ನಾಲ್ಕು ನಿಮಿಷದಲ್ಲಿ ಕೃಷ್ಣನು ಅಲ್ಲಿಗೆ ಬಂದ. ತಕ್ಷಣವೇ ಶರಣಪ್ಪನನ್ನು ಪರೀಕ್ಷೆಗೊಳಪಡಿಸಿದ. ಸಮಸ್ಯೆ ಏನು ಎಂಬುದನ್ನು ಅರಿತ. ತಡಮಾಡದೆ ದುಬಾರಿ ಬೆಲೆಯ ತರಹೇವಾರಿ